† ಶ್ರೀ ಬಿ. ಜಿ. ಬಣಕಾರ್.– ಅದಷ್ಟು ಬೇಗ ದುರಸ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ.

Repairs to Buildings for Primary Schools in Bijapur District.

295. SRI M M. SAJJAN (Muddebihal).– Will the Minister of State for Primary and Secondary Education be pleased to state:—

(*a*) the total number of buildings of primary schools in Bijapur District for which repairs are required;

(*b*) the number of representations requesting repairs to these schools are pending disposal with the officers as on 10th October 1976;

(*c*) whether there is any proposal for delegating or authorising each Block Development Officer with the powers for spending upto Rs. 2000 for such repairs?

SRI MALLIKARJUN KHARGE (Minister of State for Primary and Secondary Education)—

(*a*) 498.

(*b*) Information not readily available.

(*c*) A proposal from the Deputy Commissioner, Dharwar, has been received requesting delegation of powers to the Block Development Officers to accord administrative approval to the extent of Rs. 1,000 This is under consideration.

ಶ್ರೀ ಎಂ. ಎಂ. ಸಜ್ಜನ್ – ಸ್ವಾಮಿ, ಪ್ರಾಥಮಿಕ ಶಾಲಾ ಕಟ್ಟಡಗಳನ್ನು ದುರಸ್ತಿ ಮಾಡಿಸಬೇಕಾದರೆ ಬೇಕಾಗುವ ಹಣವನ್ನು ಖರ್ಚು ಮಾಡುವುದಕ್ಕೆ ಡೆಪ್ಯುಟಿ ಕಮಿಷನರ್‌ಗಳಿಗೆ ಅಧಿಕಾರವನ್ನು ಕೊಟ್ಟಿದ್ದೇವೆಂದು ಹೇಳಿದ್ದೀರಿ. ನಾನು ಹೇಳಬೇಕೆಂದರೆ ಹಿಂದೆ ತೆಹಶೀಲ್ ಕಮಿಷನರ್‌ಗಳಿಗೆ ಇದ್ದ ಅಧಿಕಾರಗಳನ್ನು ತೀರ ಮೊನ್ನೆ ಮಾಡಿದ್ದರಿಂದ ನಮ್ಮ ಕಡೆಗಳಲ್ಲಿ ಸುಮಾರು 80 ರಷ್ಟು ಕಟ್ಟಡಗಳು ದುರಸ್ತಿಯಾಗದೆ ಹಾಗೆಯೇ ಇವೆ. ಇವು ಯಾವ ಗಳಿಗೆಯಲ್ಲಿ ಮಕ್ಕಳ ಮೇಲೆ ಕುಸಿದು ಬಿದ್ದು ಮಕ್ಕಳ ಪ್ರಾಣಕ್ಕೆ ಧಕ್ಕೆ ಬರುತ್ತವೋ ಗೊತ್ತಿಲ್ಲ. ಆದುದರಿಂದ ಈ ಸ್ಕೂಲ್ ಕಟ್ಟಡಗಳನ್ನು ದುರಸ್ತಿ ಮಾಡಿಸುವುದಕ್ಕೆ ಬೇಗನೆ ಕ್ರಮ ತೆಗೆದುಕೊಳ್ಳುತ್ತೀರಾ.

† ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೆ, ಕ್ಷಮಿಸಬೇಕು. ಆಗ ನನ್ನಲ್ಲಿ ಇನ್‌ಫರ್ಮೇಷನ್ ಇರಲಿಲ್ಲ. ಈಗ ಅದು ಸಿಕ್ಕಿದೆ. ಅದು ಈ ರೀತಿ ಇದೆ. ಬಿ.ಡಿ.ಓ.ಗೆ 17, ಡಿ.ಸಿ.ಗೆ. 2, ಎ.ಇ.ಓ.ಗೆ. 1 ಪಿ.ಡಬ್ಲ್ಯು.ಡಿ.ಗೆ. 1, ಗೌರ್ನಮೆಂಟ್‌ಗೆ 1 ಈ ರೀತಿ 10ನೇ ಅಕ್ಟೋಬರ್ 1976ರಂದು ಇದ್ದುದು. ಇನ್ನಿಂದು ಏನೆಂದರೆ ತಾವು ಹೇಳಿದ ಪ್ರಕಾರ ಈಗಾಗಲೇ ವಿಜಾಪುರ ಡಿಸ್ಟ್ರಿಕ್ಟ್‌ನಲ್ಲಿ 1 ಲ 25 ಸಾವಿರ ರೂ ಖರ್ಚುಗಳನ್ನು ಡೆಪ್ಯುಟಿ ಕಮಿಷನರ ರವರಿಗೆ ಕೈಲ್ ಬಿಲ್ಡಿಂಗ್ಸ್ ರಿಪೇರಿ ಮಾಡಿಸುವುದಕ್ಕೋಸ್ಕರ ಕೊಟ್ಟಿದ್ದೇವೆ. ಇವರಲ್ಲಿ ಅವರು ಎಲ್ಲೆಲ್ಲಿ ಶಾಲಾ ಕಟ್ಟಡಗಳನ್ನು ರಿಪೇರಿ ಮಾಡಿಸಬೇಕೋ ಅವನ್ನು ಬಿ.ಡಿ.ಓ. ಅವರನ್ನು

ಕೇಳಿ ಮಾಡಿಸುತ್ತಾರೆ. ಮತ್ತು ಪಿಡಬ್ಲ್ಯು ಡಿ. ಯಿಂದ, ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಮುನಿಸಿಪಾಲಿಟಿಯಿಂದ ಕೂಡ ಕಾಮಗಾರಿಯನ್ನು ಕೊಟ್ಟು ವೇರಿಯಸ್ ತರಹದಲ್ಲಿ ಕಂಟ್ರಿಬ್ಯೂಷನ್ ಪೇಮೆಂಟ್ ಅನ್ನು ಬೇರೆ ಬೇರೆ ಇಲಾಖೆಯವರಿಗೆ ತೆಗೆದುಕೊಳ್ಳುತ್ತೇವೆ. ಈ ಒಂದು ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎಂ ಎಂ ಸಜ್ಜನ್.—ತಾವು ಬಿ.ಡಿ.ಓ.ಗೆ ಶಾಲಾ ಕಟ್ಟಡಗಳ ರಿಪೇರಿಗೋಸ್ಕರ 200 ರೂಪಾಯಿಗಳನ್ನು ಖರ್ಚ್ ಮಾಡುವುದಕ್ಕೆ ತಾವು ಅವಕಾಶವನ್ನು ಕೊಟ್ಟಿದ್ದೀರಿ. ಈ 200 ರೂಪಾಯಿಗಳು ಶಾಲಾ ಕಟ್ಟಡಕ್ಕೆ ಸುಣ್ಣ ಬಳಿಸುವುದಕ್ಕೂ ಕೂಡ ಸಾಲದೇ ಬರುತ್ತದೆ. ಅದುದರಿಂದ 2 ಸಾವಿರ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಅವಕಾಶವನ್ನು ಕೊಡುವುದು ಒಳ್ಳೆಯದೆಂದು ನನ್ನ ಭಾವನೆ

ಶ್ರೀ ಮಲ್ಲಿಕಾರ್ಜುನ ಖಾರ್ಗೆ —ಇದನ್ನು ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ನವರ ಜೊತೆಯಲ್ಲಿ ಚರ್ಚೆಮಾಡಿ ನೋಡುತ್ತೇವೆ.

ಶ್ರೀ ಪಿ. ಎಂ. ಬಂಗಿ.—ಸ್ವಾಮಿ, ಇದು ಧಾರವಾಡ ಡಿ.ಸಿ. ಯಿಂದ ಬಂದಿದೆಯೋ ಇಲ್ಲ, ಬಿಜಾಪುರ ಡಿ ಸಿ ಯಿಂದ ಬಂದಿದೆಯೋ?

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ಇದು ಬಿಜಾಪುರ ಡೆಪ್ಯುಟಿ ಕಮಿಷನರ್‌ರವರಿಂದ ಬಂದಿದೆ.

ಶ್ರೀ ಎಂ. ಎಂ ಸಜ್ಜನ್.—ಸ್ವಾಮಿ, ತಾವು ರೂರಲ್ ಡೆವಲಪ್‌ಮೆಂಟ್ ಡಿಪಾರ್ಟ್‌ಮೆಂಟ್ ನವರ ಜೊತೆಯಲ್ಲಿ, ಮುನಿಸಿಪಾಲಿಟಿಯವರ ಜೊತೆಯಲ್ಲಿ ಕೂತು ಮಾತನಾಡುವ ಹೊತ್ತಿಗೆ ಅಲ್ಲಿ ಮಕ್ಕಳು ಸಾಯುತ್ತಾರೆ ಅದುದರಿಂದ ತಾವು ಎಷ್ಟು ದಿವಸದಲ್ಲಿ ಇದರ ಬಗ್ಗೆ ಕ್ರಮ ತೆಗೆದು ಕೊಳ್ಳುತ್ತೀರಿ ಎಂದು ನಮಗೆ ಭರವಸೆಯನ್ನು ಕೊಡಬೇಕು.

ಶ್ರೀ ಮಲ್ಲಿಕಾರ್ಜುನ ಖಾರ್ಗೆ.—ನಾವು ಈ ಶಾಲಾ ಕಟ್ಟಡಗಳ ರಿಪೇರಿಗೋಸ್ಕರವಾಗಿ 35 ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಈಗಾಗಲೇ ಅವರಲ್ಲಿ 28 ಲಕ್ಷ ರೂಪಾಯಿಗಳನ್ನು ಸಂಬಂಧಪಟ್ಟ ಡೆಪ್ಯುಟಿ ಕಮಿಷನರುಗಳಿಗೆ ಕೊಟ್ಟಿದ್ದೇವೆ ಇಂತಿಂಥ ಕಡೆ ಈ ರೀತಿ ರಿಪೇರಿ ಮಾಡಬೇಕೆಂದು ಸಂಬಂಧಪಟ್ಟ ಡಿ.ಸಿ. ಗಳು ನಮಗೆ ನೇರವಾಗಿ ಪತ್ರ ಬರೆದರೆ ತಕ್ಷಣ ಅದನ್ನು ಮಾಡಿಸಿಕೊಡುತ್ತೇವೆ.

Police Station at Harsoor Village

168. SRI PRABHAKAR TELKAR (Kalgi).—Will the Chief Minister be pleased to state :—

(*a*) whether representations have been made by Public to establish a Police Station at Harsoor, Gulbarga Taluk ;

(*b*) the steps taken to establish Police Station or a Police Out-Post at Harsoor Village ;

(*c*) the criteria adopted for establishing new Police Station or a Police Out-Post ;

(*d*) whether the Government has any proposal to establish a Police Station or Out-Post at Harsoor ?

(*e*) if so, when ?

SRI D. DEVARAJ URS (Chief Minister).—

(*a*) Yes.